## ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕೋರ್ಟ, ಬನಹಟ್ಟಿ

**ಸಿಸಿ. 832/2022**
**ಸಿ.ಡಬ್ಲ್ಯೂ:1  ಪಿ.ಡಬ್ಲ್ಯೂ: 5**

| | | |
|---|---|---|
| ಸಾಕ್ಷಿದಾರರ ಹೆಸರು | ರವಿಕುಮಾರ ಧರ್ಮಟ್ಟಿ | |
| ತಂದೆ/ಗಂಡನ ಹೆಸರು | ಲಕ್ಕಪ್ಪ | |
| ವಯಸ್ಸು | 41 | ವರ್ಷ |
| ಉದ್ಯೋಗ | ಪಿಐ ನಂದಗಡ | |
| ವಾಸಸ್ಥಳ | ನಂದಗಡ | |

**ಸಾಕ್ಷಿಯನ್ನು ಇಂದು ದಿನಾಂಕ: 24-01-2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಮುಖ್ಯ ವಿಚಾರಣೆ: ಮಾನ್ಯ ಎಪಿಪಿ ರವರಿಂದ**

ನಾನು 2017 ರಿಂದ 2019 ರವರೆಗೆ ಮಹಾಲಿಂಗಪುರ ಪೊಲೀಸ ಠಾಣೆಯಲ್ಲಿ ಪಿಎಸ್ಐ ಅಂತ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

2. ದಿನಾಂಕ: 14-04-2018 ರಂದು ಬೆಳಿಗ್ಗೆ 11 ಗಂಟೆಗೆ ಢವಳೇಶ್ವರ ಗ್ರಾಮದ ಹೈಸ್ಕೂಲ್ ಹತ್ತಿರ ಒಬ್ಬ ವ್ಯಕ್ತಿ ಅಕ್ರಮವಾಗಿ ಸಾರಾಯ ಮಾರಾಟ ಮಾಡುತ್ತಿದ್ದ ಕುರಿತು ಬಾತ್ಮಿ ಬಂದಿದ್ದು , ಚಾಸಾ-4 ಮತ್ತು 5 ರವರನ್ನು ಕರೆಸಿ ಬಾತ್ಮಿ ವಿಷಯ ತಿಳಿಸಿ, ಚಾಸಾ-5 ರವರ ಮುಖಾಂತರ ಚಾಸಾ-2 ಮತ್ತು 3 ರವರನ್ನು ಬರಮಾಡಿಕೊಂಡು ಅವರಿಗೆ ಬಾತ್ಮಿ ವಿಷಯ ತಿಳಿಸಿ, ಪಂಚರಾಗಲು ಕೇಳಿಕೊಂಡಾಗ ಪಂಚರಾಗಲು ಒಪ್ಪಿದರು. ನಂತರ ನಾವೆಲ್ಲರೂ ಸರಕಾರಿ ವಾಹನದಲ್ಲಿ ಸಂಖ್ಯೆ: KA-29-366 ನೇದ್ದರಲ್ಲಿ ಠಾಣೆಯಿಂದ 11.45 ಕ್ಕೆ ಹೊರಟು 12 ಸುಮಾರಿಗೆ ಬಾತ್ಮಿ ಬಂದ ಸ್ಥಳದ ಹತ್ತಿರ ಸ್ವಲ್ಪ ದೂರದಲ್ಲಿ ನಿಂತು ವಾಚ್ ಮಾಡಿ ನೋಡಲಾಗಿ , ಶಾಲೆಯ ಮುಂದಗಡೆ ಒಬ್ಬ ವ್ಯಕ್ತಿ ಅಕ್ರಮವಾಗಿ ಸಾರಾಯಿ ಮಾರಾಟ ಮಾಡುವುದನ್ನು ಖಚಿತ ಪಡಿಸಿಕೊಂಡು ಸಿಬ್ಬಂದಿಯೊಂದಗೆ ಅವನ ಮೇಲೆ ದಾಳಿ ಮಾಡಿ ಅವನನ್ನು ವಶಕ್ಕೆ ಪಡಿಸಿಕೊಂಡು , ಆತನನ್ನು ವಿಚಾರಿಸಲಾಗಿ ಆತನ ಹೆಸರು ಹಸನ್ ಹಂಗರಗಿ ಸಾ. ಢವಳೇಶ್ವರ ಅಂತ ತಿಳಿಸಿದ್ದು , ಹಾಗೂ ಪರಿಶೀಲಿಸಲಾಗಿ ಆತನ ಪ್ಲಾಸ್ಟಿಕ್ ಚೀಲದಲ್ಲಿ 180 ಎಂ ಎಲ್ನ 30 ಬ್ಯಾಗ್ ಪ್ಯಾಪರ್ ರಮ್ ಪೌಚುಗಳಿದ್ದು , ಅದರಲ್ಲಿ ಒಂದು ಪೌಚನ್ನು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕಿಸಿ ಪಂಚರ ಸಮಕ್ಷಮ ಪಂಚನಾಮೆ ಮಾಡಿ ಪಂಚರ ಸಹಿ ಪಡೆದ ಚೀಟಿಯನ್ನು ಅಂಟಿಸಲಾಯಿತು. ಸದರಿ ವ್ಯಕ್ತಿಯ ಅಂಗಶೋಧನೆ ವ ಝಡಿ

ಆತನ ಶರ್ಟ್ ಕೀಸೆಯಲ್ಲಿ 120 ರೂಪಾಯಿ ಇತ್ತು. ಸದರಿ ಪಂಚರ ಸಮಕ್ಷಮ ಮೊತ್ತವನ್ನು ಜಪ್ತು ಪಡಿಸಿಕೊಂಡು , ಸ್ಥಳದಲ್ಲಿ ಮಧ್ಯಾಹ್ನ 12.15 ರಿಂದ 1.15 ಗಂಟೆಯವರೆಗೆ ಪಂಚರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿರುತ್ತೇನೆ. ನಂತರ ಪಂಚನಾಮೆ , ಮುದ್ದೆ ಮಾಲು ಮತ್ತು ಆರೋಪಿತನ ಕಛೇರಿಗೆ ಬಂದು ಸರಕಾರಿ ತರ್ಪೆ ಪಿರ್ಯಾದಿಯನ್ನು ಚಾಸಾ-7 ರವರಿಗೆ ನೀಡಿರುತ್ತೇನೆ.

3. ಸಾಕ್ಷಿಯು ಈಗಾಗಲೇ ಗುರುತಿಸಿದ ಜಪ್ತು ಪಂಚನಾಮೆಯಾದ ನಿಪಿ-1 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ-1 ಸಿ ಎಂದು ಗುರುತಿಸಲಾಯಿತು.

4. ಸಾಕ್ಷಿಯು ಪಿರ್ಯಾದಿಯಾದ ನಿಪಿ-2 ರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ-2 ಬಿ ಎಂದು ಗುರುತಿಸಲಾಯಿತು.

5. ಸಾಕ್ಷಿಯು ಈಗಾಗಲೇ ಗುರುತಿಸಿದ ಪ್ರ ವ ವರದಿಯಾದ ನಿಪಿ-3 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ-3 ಬಿ ಎಂದು ಗುರುತಿಸಲಾಯಿತು.

6. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ.1 ಅನ್ನು ನೋಡಿ ಗುರುತಿಸಿರುತ್ತಾರೆ.

7. ಸಾಕ್ಷಿಯು ಜಪ್ತು ಮಾಡಿಕೊಂಡ ರೂ.120/- ಗಳನ್ನು ನೋಡಿದರೇ ಗುರುತಿಸುತ್ತೇನೆ.

8. ನ್ಯಾಯಾಲಯದ ಮುಂದೆ ಇರುವ ಆರೋಪಿತನನ್ನು ನೋಡಿ ಗುರುತಿಸುತ್ತೇನೆ.

<u>ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ:</u>

ದಿಃ 14-04-2018 ರಂದು ನಾನು ಠಾಣೆಯಲ್ಲಿದ್ದಾಗ ಧವಳೇಶ್ವರ ಹೈಸ್ಕೂಲ ಹತ್ತಿರ ಒಬ್ಬ ವ್ಯಕ್ತಿ ಅಕ್ರಮವಾಗಿ ಸಾರಾಯಿ ಮಾರಾಟ ಮಾಡುತ್ತಿದ್ದರ ಬಗ್ಗೆ ಬಾತ್ಮಿ ಬಂದಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದರಂತೆ ಚಾಸಾ- 2 ಮತ್ತು 3 ರವರನ್ನು ಠಾಣೆಗೆ ಬರಮಾಡಿಕೊಂಡು ಸದರಿಯವರನ್ನು ಪಂಚನಾಮೆಗೆ ಪಂಚರಾಗಲು ಕೋರಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬಾತ್ಮಿ ಬಂದ ಸ್ಥಳದ ಹತ್ತಿರ ವಾಚ್ ಮಾಡಿ ನೋಡಲಾಗಿ ಸದರಿ ಆರೋಪಿತನು ಅಕ್ರಮವಾಗಿ ಸಾರಾಯಿ ಮಾರಾಟ ಮಾಡುತ್ತಿದ್ದನು ಎಂದು ಕಂಡು ಬಂದಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಅಂಗ ಶೋಧನೆ ಮಾಡಿದಾಗ ಆರೋಪಿತನ ಬಳಿಯಿಂದ ರೂ.120/- ಸಿಕ್ಕಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚರ ಸಮಕ್ಷಮ ಸ್ಥಳದಲ್ಲಿ ಪಂಚನಾಮೆ ಮಾಡಲಾಯಿತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ

ಹಾಗೂ ಸದರಿ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲದೇ ಇದ್ದರು ಆರೋಪಿಯ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

Sd/-

**ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,**
**ಬನಹಟ್ಟಿ**